ಸರ್ಕಾರಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು

281 (541) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 31-12-97 ರಂದು ರಾಜ್ಯ ಸರ್ಕಾರ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ವಿವರ ನೀಡುವುದು; ಈ ಹುದ್ದೆಗಳು ಯಾವ ವರ್ಷದಿಂದ ಖಾಲಿ ಇರುತ್ತದೆ.

ಆ) ಇವುಗಳನ್ನು ಭರ್ತಿ ಮಾಡಲು ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮಗಳು ಏನು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) 1,06,247

(ದಿನಾಂಕ 31-3-98 ರಲ್ಲಿದ್ದಂತೆ)

ಇಲಾಖಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ನಿವೃತ್ತಿ, ಮರಣ, ರಾಜೀನಾಮೆ, ಹೊಸ ಹುದ್ದೆಗಳ ಮಂಜೂರಾತಿ ಇತ್ಯಾದಿಯಿಂದ ಕಾಲಕಾಲ ರಿಕ್ತ ಸ್ಥಾನಗಳು ಯಾವಾಗ ಉದ್ಭವಿಸಿವೆಯೆಂದು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲ.

ಆ) ನೇರ ನೇಮಕಾತಿ ನಿರ್ಬಂಧವನ್ನು ದಿನಾಂಕ 8-11-93 ರಿಂದ ರದ್ದುಗೊಳಿಸಲಾಗಿದೆ. ಅವಶ್ಯವಿರುವ ಕಡೆ, ನೇರ ನೇಮಕಾತಿ ಮಾಡಲು ಮಿತವ್ಯಯ ಆದೇಶವನ್ನು ಸಡಿಲಿಸಿಕೊಂಡು ನೇರ ನೇಮಕಾಗಿ ರಿಕ್ತ ಸ್ಥಾನಗಳನ್ನು ತುಂಬಲು ಸಂಬಂಧಿಸಿದ ಇಲಾಖೆಗಳು ಕ್ರಮ ಕೈಗೊಳ್ಳುತ್ತಿವೆ.

ಆದರೆ, ಇನ್ನು ಮುಂದೆ, 1998-99ರ ಆಯವ್ಯಯದ ಭಾಷಣದಲ್ಲಿ ಹೇಳಿರುವಂತೆ, ಅನಾವಶ್ಯಕ ಖರ್ಚು ವೆಚ್ಚಗಳಿಗೆ ತಡೆಯೊಡ್ಡಲು, ಶಿಕ್ಷಣ ಮತ್ತು ಆರೋಗ್ಯ ವಲಯಗಳನ್ನು ಹೊರತುಪಡಿಸಿ, ದಿನಾಂಕ 1-4-98 ರಂದು ಇರುವ ಉಳಿದ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ ಸ್ಥಗಿತಗೊಳಿಸಲಾಗುವುದು.

ಅನುಬಂಧ

ರಾಜ್ಯದ ವಿವಿಧ ಇಲಾಖೆಗಳಲ್ಲಿ 1998-99ರ ಪ್ರಾರಂಭದಲ್ಲಿ ಖಾಲಿ ಇರುವ ಹುದ್ದೆಗಳು

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಒಟ್ಟು ಖಾಲಿ ಹುದ್ದೆಗಳು
1.	ಒಳಾಡಳಿತ ಮತ್ತು ಸಾರಿಗೆ ಇಲಾಖೆ	3,122
2.	ಆರ್ಥಿಕ ಇಲಾಖೆ	2,402
3.	ಶಿಕ್ಷಣ ಇಲಾಖೆ	35,189
4.	ಲೋಕೋಪಯೋಗಿ ಇಲಾಖೆ	1,788
5.	ನೀರಾವರಿ ಇಲಾಖೆ	3,935
6.	ಕಾನೂನು ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ	3,483
7.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	21,945
8.	ಸಮಾಜ ಕಲ್ಯಾಣ ಇಲಾಖೆ	4,487
9.	ಕಾರ್ಮಿಕ ಇಲಾಖೆ	922
10.	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ	668
11.	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	269
12.	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	700
13.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	2,502
14.	ವಸತಿ ಇಲಾಖೆ	15
15.	ನಗರಾಭಿವೃದ್ಧಿ ಇಲಾಖೆ	517
16.	ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	4,294
17.	ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಇಲಾಖೆ	2,119
18.	ಕೃಷಿ ಮತ್ತು ತೋಟಗಾರಿಕೆ ಇಲಾಖೆ	3,444
19.	ಕಂದಾಯ ಇಲಾಖೆ	5,302
20.	ಸಹಕಾರ ಇಲಾಖೆ	1,340
21.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	256
22.	ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ಯಂತ್ರ ಕಲೆ ಇಲಾಖೆ	343
23.	ಇಂಧನ ಇಲಾಖೆ	3
24.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	2,779
25.	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	880
26.	ರಾಜ್ಯಪಾಲರ ಸಚಿವಾಲಯ	24
27.	ಇತರೆ ಆಡಳಿತ ಸೇವೆಗಳು	2,654
28.	ಇತರೆ ಸಾಮಾನ್ಯ ಆರ್ಥಿಕ ಸೇವೆಗಳು	865
	ಒಟ್ಟು	1,06,247